## ನಿಮ್ಮೊಡನೆ

# ವೈದ್ಯರೇಕೆ ಹಳ್ಳಿಗೆ ಹೋಗುತ್ತಿಲ್ಲ?

ವೈದ್ಯಕೀಯ ಜಗತ್ತಿಗೆ ಸಂಬಂಧಿಸಿದ ಸಮೀಕ್ಷೆಗಳು ಪ್ರಕಟ ಆದಾಗಲೆಲ್ಲ ನಾವು ಎಷ್ಟು ಹಿಂದುಳಿದಿದ್ದೇವೆ ಎನ್ನುವುದರ ಅರಿವಾಗುತ್ತದೆ. ಇವತ್ತು ವೈದ್ಯಕೀಯ ಆವಿಷ್ಕಾರಗಳ ಮಟ್ಟಿಗೆ ಇಡೀ ಜಗತ್ತೇ ಹುಬ್ಬೇರಿಸುವಂತಹ ಸಾಧನೆಗಳನ್ನು ನಮ್ಮ ದೇಶದ ವೈದ್ಯರು ಮಾಡಿದ್ದಾರೆ. ಆದರೆ ಈ ಆವಿಷ್ಕಾರಗಳ ಲಾಭ ಯಾರಿಗೆ ಸಿಗುತ್ತಿದೆ? ಕೇವಲ ನಗರದ ಜನರಿಗೆ. ಕಳೆದ ವಾರ ಪ್ರಕಟವಾದ ಸಮೀಕ್ಷೆಯೊಂದರ ಪ್ರಕಾರ, ಭಾರತದ ಗ್ರಾಮಗಳಲ್ಲಿರುವ ವೈದ್ಯರ ಪ್ರಮಾಣ ಶೇಕಡಾ 20 ಮಾತ್ರ. ಶೇಕಡಾ 68ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ದೇಶದಲ್ಲಿ ಒಟ್ಟು ವೈದ್ಯರ ಸಂಖ್ಯೆಯಲ್ಲಿ ಶೇಕಡಾ 20ರಷ್ಟು ಮಂದಿ ಮಾತ್ರ ಗ್ರಾಮೀಣ ಪ್ರದೇಶಗಳಲ್ಲಿ ಇದ್ದಾರೆ ಎಂದರೆ, ನಿಜಕ್ಕೂ ಶೋಚನೀಯ ಸಂಗತಿ.

ಮಾನವ ಸಂಶೋಧನಾ ಸಂಸ್ಥೆ (ಕೆಪಿಎಂಜಿ) ಮತ್ತು ಭಾರತದ ಔಷಧ ತಯಾರಕರ ಸಂಘಟನೆ (ಒಪಿಪಿಐ) ಜತೆಗೂಡಿ ನಡೆಸಿದ ಈ ಸಮೀಕ್ಷೆ ಇನ್ನೂ ಕೆಲವು ಗಾಬರಿ ಹುಟ್ಟಿಸುವ ಅಂಶಗಳನ್ನು ಬಯಲಿಗೆ ತಂದಿದೆ. ಒಟ್ಟು ದೇಶೀಯ ಉತ್ಪಾದನೆಯಲ್ಲಿ ನಾವು ಆರೋಗ್ಯ ಸೇವೆಗೆ ಖರ್ಚು ಮಾಡುತ್ತಿರುವ ಮೊತ್ತವೂ ಅತ್ಯಲ್ಪವೇ. ಅಮೆರಿಕದಂತಹ ದೇಶ ಕೂಡಾ ಒಟ್ಟು ದೇಶೀಯ ಉತ್ಪಾದನೆಯಲ್ಲಿ ಶೇಕಡಾ 16.9ರಷ್ಟು ಪಾಲನ್ನು ಆರೋಗ್ಯ ಸೇವೆಗೆ ಖರ್ಚು ಮಾಡುತ್ತಿದೆ. ಆದರೆ ಭಾರತ ಖರ್ಚು ಮಾಡುತ್ತಿರುವುದು ಶೇಕಡಾ 4.1 ಮಾತ್ರ. ಖಾಸಗಿ ಆರೋಗ್ಯ ಸಂಸ್ಥೆಗಳು ಹೆಚ್ಚಿನ ಲಾಭದಾಸೆಗೆ ನಗರ ಪ್ರದೇಶಗಳಲ್ಲಿ ಕೇಂದ್ರೀಕೃತ ಆಗುತ್ತಿರುವುದು ಸಹಜವೇ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲರಿಗೂ ಆರೋಗ್ಯ ಸೌಲಭ್ಯಗಳು ಸಿಗುವಂತೆ ನೋಡಿಕೊಳ್ಳಬೇಕಾದ ಸರ್ಕಾರವೇ ಹೀಗೆ ಅತ್ಯಲ್ಪ ಖರ್ಚು ಮಾಡಿದರೆ ಹೇಗೆ? ದೇಶದಲ್ಲಿರುವ ಒಟ್ಟು ಕ್ಲಿನಿಕ್‌ಗಳಲ್ಲಿ ಶೇಕಡಾ 75ರಷ್ಟು ಮತ್ತು ಆಸ್ಪತ್ರೆಗಳಲ್ಲಿ ಶೇಕಡಾ 60ರಷ್ಟು ನಗರ ಪ್ರದೇಶಗಳಲ್ಲೇ ಇವೆ ಎಂದೂ ಸಮೀಕ್ಷೆ ಬೊಟ್ಟು ಮಾಡಿದೆ.

ಸಾಂಕ್ರಾಮಿಕ ರೋಗಗಳು ಹರಡಿದರೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸಾಯುವುದು ಸಹಜ. ಆದರೆ ನಮ್ಮಲ್ಲಿ ಅನಾರೋಗ್ಯದಿಂದ ಆಗುವ ಸಾವುಗಳ ಪೈಕಿ ಶೇಕಡಾ 60ರಷ್ಟು ಜನರು ಸಾಂಕ್ರಾಮಿಕವಲ್ಲದ ರೋಗಗಳಿಂದ ಸಾಯುತ್ತಿದ್ದಾರೆ. ಸಕಾಲಕ್ಕೆ ವೈದ್ಯಕೀಯ ನೆರವು ಸಿಗದೆ ಇರುವುದರಿಂದಲೇ ಇದು ಆಗುತ್ತಿದೆ. ಭಾರತದಲ್ಲಿ ಕೇವಲ ಶೇಕಡಾ 37ರಷ್ಟು ಗ್ರಾಮೀಣ ಜನರಿಗೆ ಮಾತ್ರ ತಮ್ಮ ಮನೆಯ 5 ಕಿ.ಮೀ ಸುತ್ತ ಆಸ್ಪತ್ರೆ ಸೌಲಭ್ಯ ಸಿಗುತ್ತಿದೆ ಎನ್ನುವುದು ಪರಿಸ್ಥಿತಿಯ ಗಂಭೀರತೆಯನ್ನು ಸಾರುತ್ತಿದೆ.

ಆಫ್ರಿಕಾವನ್ನು ಹೊರತುಪಡಿಸಿ ಜಗತ್ತಿನ ಬಹುತೇಕ ದೇಶಗಳಲ್ಲಿ ಜನರ ಸರಾಸರಿ ಜೀವಿತಾವಧಿ ಹೆಚ್ಚಾಗುತ್ತಿದೆ. ಸುಲಭವಾಗಿ ಲಭ್ಯವಾಗುವ ವೈದ್ಯಕೀಯ ಸೌಲಭ್ಯಗಳಿಂದಾಗಿ ಇದು ಸಾಧ್ಯವಾಗಿದೆ. ಯೂರೋಪಿನ ದೇಶಗಳಲ್ಲಂತೂ ದೀರ್ಘಾಯುಷ್ಯದ ಜತೆಗೆ ಜನರ ಜೀವನದ ಗುಣಮಟ್ಟವೂ ಅತ್ಯುತ್ತಮವಾಗಿದೆ. ಬ್ರಿಕ್ಸ್ ಗುಂಪಿನ ದೇಶಗಳಲ್ಲಿ ಅತ್ಯಂತ ಕಡಿಮೆ ಜೀವಿತಾವಧಿ ಹೊಂದಿರುವ ದೇಶವೆಂದರೆ ಭಾರತ. ಚೀನಾದಲ್ಲಿ ಜನರ ಸರಾಸರಿ ಜೀವಿತಾವಧಿ 75 ವರ್ಷಗಳಾಗಿದ್ದರೆ, ಬ್ರೆಝಿಲ್‌ನಲ್ಲಿ ಅದು 73 ವರ್ಷ. ರಷ್ಯಾದಲ್ಲೂ 70 ವರ್ಷ. ಆದರೆ ನಮ್ಮಲ್ಲಿ ಜನರ ಸರಾಸರಿ ಜೀವಿತಾವಧಿ 68 ವರ್ಷ ಮಾತ್ರ.

ಸಾಮಾನ್ಯವಾಗಿ ವೈದ್ಯರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸಲು ಬಯಸುವುದಿಲ್ಲ ಎನ್ನುವುದು ನಮ್ಮಲ್ಲಿ ಕೇಳಿಬರುವ ದೂರು. ಸರ್ಕಾರ ಈ ನಿಟ್ಟಿನಲ್ಲಿ ಕಡ್ಡಾಯ ಸೇವಾವಧಿಯ ಕಾಯ್ದೆ ಮಾಡಿದ್ದರೂ, ಸಂಬಳ ಸವಲತ್ತುಗಳನ್ನು ಹೆಚ್ಚಿಗೆ ಮಾಡಿದ್ದರೂ ಸೂಕ್ತ ಸ್ಪಂದನೆ ವೈದ್ಯರಿಂದ ಸಿಗುತ್ತಿಲ್ಲ ಎನ್ನಲಾಗಿದೆ. ಅದಕ್ಕೂ ಸಕಾರಣಗಳಿವೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸೂಕ್ತ ಮೂಲಸೌಲಭ್ಯಗಳ ಕೊರತೆ ಇದೆ. ನೀರು, ವಿದ್ಯುತ್ ಪೂರೈಕೆ ಸರಿಯಾಗಿಲ್ಲದ ಸಾವಿರಾರು ಹಳ್ಳಿಗಳು ನಮ್ಮಲ್ಲಿವೆ. ವಿದ್ಯುತ್ ಪೂರೈಕೆ ಸರಿಯಿಲ್ಲವೆಂದರೆ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳೂ ಬಳಕೆಗೆ ಸಿಗುವುದಿಲ್ಲ ಎಂದರ್ಥ. ಆರೋಗ್ಯ ಕ್ಷೇತ್ರದ ಇಂತಹ ಸಮಸ್ಯೆಗಳನ್ನು ಹೋಗಲಾಡಿಸಲು ಸರ್ಕಾರ ನೂರಾರು ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಘೋಷಿಸಿದೆ. ಪ್ರತಿ ವರ್ಷದ ಮುಂಗಡಪತ್ರದಲ್ಲೂ ಹೊಸ ಕಾರ್ಯಕ್ರಮಗಳನ್ನು ಪ್ರಕಟಿಸಲಾಗುತ್ತದೆ. ಆದರೆ ಈ ಯೋಜನೆಗಳು ಸಮರ್ಪಕವಾಗಿ ಜಾರಿಗೆ ಬರುತ್ತಿಲ್ಲ; ಸೂಕ್ತ ಸ್ಥಳಗಳಿಗೆ ತಲುಪುತ್ತಿಲ್ಲ ಎನ್ನುವುದು ಸ್ಪಷ್ಟ.

ನಮ್ಮಲ್ಲಿರುವ ಜನಸಂಖ್ಯೆಗೆ ಒಟ್ಟು ವೈದ್ಯರ ಸಂಖ್ಯೆಯೂ ಕಡಿಮೆ ಇದೆ. ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗದರ್ಶಿ ಸೂತ್ರಗಳ ಪ್ರಕಾರ, 600 ಜನರಿಗೆ ಒಬ್ಬ ವೈದ್ಯರು ಇರಬೇಕು. ಆದರೆ ನಮ್ಮಲ್ಲಿ 1800 ಜನರಿಗೆ ಒಬ್ಬ ವೈದ್ಯರಿದ್ದಾರೆ. ಅದರಲ್ಲೂ ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ವೈದ್ಯರ ಸಂಖ್ಯೆ ಕಡಿಮೆಯಾಗುತ್ತಿರುವುದು ಶೋಚನೀಯ. ಎರಡು ವರ್ಷಗಳ ಹಿಂದೆ ನಡೆಸಿದ ಸಮೀಕ್ಷೆಯಲ್ಲಿ ಗ್ರಾಮೀಣ ವೈದ್ಯರ ಪ್ರಮಾಣ ಶೇಕಡಾ 33 ಎಂದು ದಾಖಲಾಗಿತ್ತು. ಈಗ ಅದೂ ಶೇಕಡಾ 20ಕ್ಕೆ ಇಳಿದಿದೆ ಎಂದರೆ ಪರಿಸ್ಥಿತಿ ಗಂಭೀರವಾಗಿದೆ ಎಂದೇ ಅರ್ಥ.

■ ಬಿ.ಎಂ.ಹನೀಫ್

ಎರಡು ವರ್ಷಗಳ ಹಿಂದೆ ನಡೆಸಿದ ಸಮೀಕ್ಷೆಯಲ್ಲಿ ಗ್ರಾಮೀಣ ವೈದ್ಯರ ಪ್ರಮಾಣ ಶೇಕಡಾ 33 ಎಂದು ದಾಖಲಾಗಿತ್ತು. ಈಗ ಅದೂ ಶೇಕಡಾ 20ಕ್ಕೆ ಇಳಿದಿದೆ ಎಂದರೆ ಪರಿಸ್ಥಿತಿ ಗಂಭೀರವಾಗಿದೆ ಎಂದೇ ಅರ್ಥ.

